ಕೆಳಗಿಳಿಯುತ್ತ ಹೋಗುತ್ತಾನೆ. ಮನೆ ಕಟ್ಟುವವನು ಮೇಲೆರುತ್ತ ಹೋಗುತ್ತಾನೆ. ಮಾತೆ ತಿಷ್ಯರಕ್ಷಿತಾ ಅಧಃಪತನಕ್ಕಿಳಿಯುವ ದಾರಿ ಆರಿಸಿಕೊಂಡಿದ್ದಾಳೆ. ಅದು ಎಲ್ಲಿಗೆ ತಲುಪುತ್ತದೆಯೋ ಏನೋ?

ಎರಡು ದಿನ ಕಳೆಯುವಷ್ಟರಲ್ಲಿ ಚಿಕ್ಕಅವ್ವ ತಿಷ್ಯರಕ್ಷಿತಾ ತಕ್ಷಶಿಲೆಗೆ ಬಂದೇ ಬಿಟ್ಟಳು. ಸಾಧ್ಯವಾದಷ್ಟು ನಾನವಳ ಕಣ್ಣುತಪ್ಪಿಸಿ ತಿರುಗಾಡುತ್ತಿದ್ದೆ. ಆದರೆ, ಒಂದು ದಿನ ಒಡ್ಡೋಲಗಕ್ಕೆ ಹೊರಟು ನಿಂತ ಸಂದರ್ಭದಲ್ಲಿ ಬಾಗಿಲಲ್ಲೇ ಎದುರಾದಳು; ನನ್ನ ಬರುವನ್ನೇ ನಿರೀಕ್ಷಿಸುತ್ತಿದ್ದಳೇನೊ? ''ಏನು ಕುಣಾಲ? ನಾನು ಬಂದು ವಾರವಾಯಿತು. ನಾಲ್ಕು ಮಾತು ನನ್ನೊಡನೆ ಆಡದಷ್ಟು ರಾಜಕಾರ್ಯವೆ? ನನ್ನನ್ನು ಕಂಡರೆ ನಿನಗಿಷ್ಟವಿಲ್ಲವೆ?'' ಧ್ವನಿಯಲ್ಲಿ ಜೇನು ತೊಟ್ಟಿಕ್ಕುತ್ತಿತ್ತು.

''ಹಾಗೇನಿಲ್ಲ ಚಿಕ್ಕವ್ವ, ಸಾಮ್ರಾಟರು ನಿರ್ವಹಿಸಲು ಸೂಚಿಸಿದ ಕೆಲವು ಕಾರ್ಯಗಳಿದ್ದವು, ಹೀಗಾಗಿ ಬಿಡುವು ಸಿಗಲಿಲ್ಲ.''

''ಚಿಕ್ಕವ್ವ, ಚಿಕ್ಕವ್ವ ಎಂದು ಕರೆಯಬೇಡ ಕುಣಾಲ. ನಿನಗಿಂತ ನನಗೆ ತುಂಬ ವಯಸ್ಸಾಗಿದೆ ಎಂಬ ಭಾವ ಬರುತ್ತದೆ ನನಗೆ. ಹಾಗೆ ನೋಡಿದರೆ ಕಾಂಚನಮಾಲಾ ಹಾಗೂ ನಾನು ಹೆಚ್ಚು ಕಡಿಮೆ ಸಮವಯಸ್ಕರು. ಒಂದು ಮಗುವಾಗಿದ್ದರಿಂದ ಅವಳ ಮೈಕಟ್ಟು ಸಡಿಲಾಗಿರಬಹುದು. ಅವಳು ನನಗಿಂತ ಒಂದೆರಡು ವರ್ಷ ದೊಡ್ಡವಳಿರಬಹುದು, ಅಷ್ಟೇ. ಹೀಗಿರುವಾಗ ನನ್ನನ್ನು ಚಿಕ್ಕವ್ವ ಎನ್ನುವುದೆ? ಪ್ರೀತಿಯಿಂದ 'ತಿಷ್ಯ' ಎನ್ನು ಸಾಕು'' ಎಂದಳು.

ಒಂದೆರಡು ವಾಕ್ಯಗಳಲ್ಲಿಯೆ ತಾನು ಹೇಳಬೇಕಾದುದನ್ನೆಲ್ಲ ಹೇಳಿ ಮುಗಿಸಿದ್ದಳು. ಇಂಥ ಸನ್ನಿವೇಶಗಳು ನನ್ನನ್ನು ತುಂಬ ಗಲಿಬಿಲಿಗೊಳಿಸುತ್ತಿದ್ದವು, ಘಾಸಿಗೊಳಿಸುತ್ತಿದ್ದವು. ಆದರೆ, ಇದಕ್ಕಿಂತಲೂ ಆಘಾತಕಾರಿ ಘಟನೆ ಮುಂದೆ ಜರುಗಲಿದೆ ಎಂದು ನಾನು ಅಂದುಕೊಂಡಿರಲಿಲ್ಲ. ಅದು ಜರುಗಿಯೂ ಹೋಯಿತು.

ವೈಶಾಖ ಕಳೆದು ಮುಂಗಾರು ಮಳೆ ಕಾಲೂರುತ್ತಿದ್ದ ಸಮಯವದು. ಸಾಮಾನ್ಯವಾಗಿ ಮಳೆಗಾಲದ ಸಂಜೆಗಳನ್ನು ನಾನು ಸಂಗೀತ ಸಾಧನೆಗೆ ಮೀಸಲಿಟ್ಟಿರುತ್ತಿದ್ದೆ. ಅಂತೆಯೇ ಅಂದು ಸಂಗೀತಾಲಯದಲ್ಲಿ ವೀಣೆ ಶ್ರುತಿ ಮಾಡುವ ಸಮಯಕ್ಕೆ ಸರಿಯಾಗಿ ಚಿಕ್ಕವ್ವ ಒಳಗೆ ಪ್ರವೇಶಿಸಿದಳು. ನಾನು ಶ್ರುತಿಗೊಳಿಸುವುದನ್ನು ನಿಲ್ಲಿಸಿ ಚಿಕ್ಕವ್ವನಿಗೆ ಗೌರವ ತೋರಿಸಲು ಎದ್ದು ನಿಲ್ಲಬೇಕು; ಧಾವಿಸಿ ಬಂದ ಆಕೆ ನನ್ನ ಭುಜ ಹಿಡಿದು ಏಳುವುದನ್ನು ತಡೆದಾಗ ನಾನು ಅನಿವಾರ್ಯವಾಗಿ ಕುಳಿತೆ.

'ಕುಣಾಲ, ನೀನಿಂದು ನನಗೆ ಸಾಥ್ ನೀಡಬೇಕು. ನಾನು ಹಾಡುವೆ, ನೀನು ವೀಣೆ ನುಡಿಸು' ಎಂಬ ಚಿಕ್ಕವ್ವನ ಮಾತಿಗೆ, ''ಇಲ್ಲ ಚಿಕ್ಕವ್ವ, ನನಗೆ ವೀಣೆಯಲ್ಲಿ ಪರಿಣತಿ ಇಲ್ಲ, ಕ್ಷಮಿಸು'' ಎಂದೆ.

''ನಿನ್ನೆ ಸಂಜೆ ನೀನು ಮೇಘಮಲ್ಹಾರ ರಾಗವನ್ನು ವೀಣೆಯಲ್ಲಿ ನುಡಿಸಿದುದನ್ನು ನಾನು ಕೇಳಿರುವೆ. ಆಸ್ಥಾನದ ಸಂಗೀತವಿದ್ವಾನನೆನಿಸಿದ ವೈಣಿಕನಿಗಿಂತಲೂ ನೀನು ಚೆನ್ನಾಗಿ ನುಡಿಸಿದೆ. ನನ್ನ ಪುಟ್ಟ ಕೋರಿಕೆಯನ್ನು ನಿರಾಕರಿಸಬೇಡ'' ಎಂಬ ವಿನಂತಿಗೆ ನಾನು ಮಣಿಯಲೇ ಬೇಕಾಯಿತು.

ಸಂಜೆಯ ಸೂರ್ಯನ ಕಿರಣಗಳು ಜಾಲಂಧ್ರದಿಂದ ಸೂಸಿ ಸಂಗೀತಾಲಯಕ್ಕೆ ಒಂದು ರಮ್ಯ ಸ್ಪರ್ಶ ನೀಡಿದ್ದವು. ಹಂಸ ಬಿಳುಪಿನ ವಸ್ತ್ರದಿಂದ ಕಂಗೊಳಿಸುತ್ತಿದ್ದ ಚಿಕ್ಕವ್ವ, ಕೊರಳೊಳಗಿನ ಮುತ್ತಿನ ಏಕಾವಳಿ ಆಕೆಯ ರೂಪಕ್ಕೆ ಒಂದು ಸರಳ ದಿವ್ಯಕಳೆಯನ್ನು ಒದಗಿಸಿತ್ತು. ''ಯಾವ ರಾಗ?'' ಎಂದು ಕೇಳುತ್ತಿರುವಂತೆಯೆ, ''ಪ್ರಣಯಿಗಳಿಗೆ ಪ್ರಿಯವಾದ ಮಲ್ಹಾರ ರಾಗದಲ್ಲೇ ಹಾಡುವೆ'' ಎಂದು ಹೇಳಿ ಹಾಡತೊಡಗಿದಳು.

''ಯೇ ಗರಜತ ಆಯಿ ಬದರವಾ
ಆತ ಹೀ ಸಹಾವೆ
ರುಮಝುಮ ಚಹು ಔರತೇ ಬರಸೇ...''

ಆಹ್! ಎಂಥ ದಿವ್ಯಧ್ವನಿ ನಿನ್ನ ಚಿಕ್ಕವ್ವನದು. ಕೋಟಿಗೊಬ್ಬರಿಗಾದರೂ ಇಂಥ ಕಂಠಸಿರಿ ಇರಲು ಸಾಧ್ಯವಿಲ್ಲ ಎಂದುಕೊಳ್ಳುತ್ತಲೇ,

''ರೆರೆಪ, ಮಪನಿದನಿಸ, ದನಿಮಪ, ಗಮರೆಸ...'' ಎಂದು ಮಲ್ಹಾರ ರಾಗವನ್ನು ನುಡಿಸತೊಡಗಿದೆ.

ನಮಗಿರವಿಲ್ಲದಂತೆಯೆ ಅಲ್ಲೊಂದು ಗಂಧರ್ವಲೋಕ ಸೃಷ್ಟಿಯಾಗಿತ್ತು. ವಾತಾವರಣದಲ್ಲಿ ಸಂಭ್ರಮ, ಮಳೆಗಾಲದ ವೈಭವ ತುಂಬತೊಡಗಿತ್ತು.

''ಘನ ಘೋರ ಛಾಯಿ ಘಟಾ
ಸನನ ಸನನ ಪವನ ಝುಕರೋರ